## ನೋಟದಾಗೆ ಮೋಡಿಯ ಮಾಡಿ...

ನಾಗೇಂದ್ರ ಅರಸ್ ನಿರ್ದೇಶನದ 'ಜಸ್ಟ್ ಲವ್' ಚಿತ್ರದ ಚಿತ್ರೀಕರಣ ಮುಗಿದಿದೆ. ಗೀತೆಗಳ ಧ್ವನಿಮುದ್ರಿಕೆಯೂ ಪೇಟೆಯಲ್ಲಿದೆ. ಉಳಿದಿರುವುದು, ಸಿನಿಮಾ ತೆರೆಕಾಣುವುದು ಮಾತ್ರ. ಮಾರ್ಚ್ ತಿಂಗಳಿನಲ್ಲಿಯೇ ಸಿನಿಮಾವನ್ನು ತೆರೆಕಾಣಿಸಲು ಚಿತ್ರತಂಡ ಪ್ರಯತ್ನಿಸುತ್ತಿದೆ.

ಕಿರುತೆರೆಯ ಜನಪ್ರಿಯ ಧಾರಾವಾಹಿ 'ಅಶ್ವಿನಿ ನಕ್ಷತ್ರ'ದ ಜೆ.ಕೆ. ಎನ್ನುವ ಪಾತ್ರದ ಮೂಲಕ ಜನಪ್ರಿಯರಾಗಿರುವ ಕಾರ್ತೀಕ್ 'ಜಸ್ಟ್ ಲವ್' ಚಿತ್ರದ ನಾಯಕ. ನೋಟದಿಂದಲೇ ಕಿರುತೆರೆ ನೋಡುಗರನ್ನು ಮೋಡಿ ಮಾಡಿರುವ ಈ ಜೆ.ಕೆ. ಇದೀಗ ಬೆಳ್ಳಿತೆರೆಯಲ್ಲೂ ಅದೃಷ್ಟ ಪರೀಕ್ಷೆಗೆ ತೊಡಗಿದ್ದಾರೆ. ಹಾಗೆಂದು ಕಾರ್ತೀಕ್ ಅವರಿಗೆ ಸಿನಿಮಾ ಹೊಸತೇನೂ ಅಲ್ಲ. ಕೆಲವು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈಗ ಕಿರುತೆರೆ ಜನಪ್ರಿಯತೆಯನ್ನು ಬೆಳ್ಳಿತೆರೆಗೆ ವಿಸ್ತರಿಸಿಕೊಳ್ಳುವ ಪ್ರಯತ್ನ ಅವರದು.

ನೃತ್ಯದಲ್ಲಿ ಅಷ್ಟೇನೂ ಪರಿಶ್ರಮ ಇಲ್ಲದೆ ಹೋದರೂ ಚಿತ್ರದಲ್ಲಿ ತಮ್ಮನ್ನು ಯರ್ರಾಬಿರ್ರಿ ಕುಣಿಸಿರುವ ನಿರ್ದೇಶಕರ ಬಗ್ಗೆ ಕಾರ್ತೀಕ್ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಹಾಂ, ಈ ಕಾರ್ತೀಕ್ ನಟ ಸುದೀಪ್ ಅವರ ಗೆಳೆಯರ ಬಳಗದ ಸದಸ್ಯರು. ತಮ್ಮ ಗೆಳೆಯನ ಸಿನಿಮಾಯಾನದ ಬಗ್ಗೆ ಸುದೀಪ್ ಖುಷಿ ವ್ಯಕ್ತಪಡಿಸುತ್ತಾರೆ. 'ಜಸ್ಟ್ ಲವ್ ಸಿನಿಮಾ ಯಶಸ್ವಿ ಪ್ರದರ್ಶನ ಕಂಡ ನಂತರವೂ ಗೆಳೆಯನ ಮುಗ್ಧತೆ ಹಿಂದಿನಂತೆಯೇ ಇರಲಿ' ಎನ್ನುವ ಹಾರೈಕೆ, ಕಿವಿಮಾತು ಅವರದು.





## ಹೂವು ಚೆಲುವೆಲ್ಲ ನಂದೆಂದಿತು

ಹಳದಿ ಹೂಗಳ ಚಿತ್ತಾರದ ಸ್ಕರ್ಟ್ ತೊಟ್ಟಿದ್ದ ನಟಿ ಸಿಂಧು ಲೋಕನಾಥ್ ಕೂಡ ಒಂದು ದೊಡ್ಡ ಹೂವಿನಂತೆಯೇ ಕಾಣಿಸುತ್ತಿದ್ದರು. ಚಿಕ್ಕ ಬಟ್ಟೆ ತೊಟ್ಟಿದ್ದ ಅವರು ದೊಡ್ಡ ನಗೆ ಅರಳಿಸಿಕೊಂಡು ಸುಳಿದಾಡುತ್ತಿದ್ದರೆ, 'ಹೂವು ಚೆಲುವೆಲ್ಲ ನಂದೆಂದಿತು' ಗೀತೆ ಕೆಲವರಿಗಾದರೂ ನೆನಪಾಗಿರಬೇಕು. ಅಂದಹಾಗೆ, ಸಿಂಧು ಅವರ ಈ ಬಣ್ಣದ ವೇಷಕ್ಕೆ ವೇದಿಕೆ ಆದುದು 'ಎಂದೆಂದೂ ನಿನಗಾಗಿ' ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಸಮಾರಂಭ.

'ಎಂದೆಂದೂ ನಿನಗಾಗಿ' ಮಹೇಶ್ ರಾವ್ ನಿರ್ದೇಶನದ ಸಿನಿಮಾ. ತಮಿಳು ಚಿತ್ರವೊಂದನ್ನು ಆಧರಿಸಿದ ಈ ರೀಮೇಕ್ ಸಿನಿಮಾ, ಎರಡು ಯುವಜೋಡಿಗಳ ನವಿರು ಪ್ರೇಮಕಥೆಯನ್ನೂ ಆಕಸ್ಮಿಕ ದುರಂತವೊಂದನ್ನೂ ಹಿಡಿದಿಡಲು ಪ್ರಯತ್ನಿಸುವ ವಿಶಿಷ್ಟ ಕಥನ ಹೊಂದಿದೆ. ಕಥೆಯನ್ನೇ ಬಂಡವಾಳವಾಗುಳ್ಳ ಈ ಚಿತ್ರದ ಪಾತ್ರ ಸಿಂಧು ಅವರ ಪ್ರತಿಭೆಗೆ ಹೊಸ ಸವಾಲಿನಂತೆ ಕಾಣಿಸಿದೆ. ಈ ಚಿತ್ರದಲ್ಲವರಿಗೆ ಅನೀಶ್ ತೇಜೇಶ್ವರ್ ಜೋಡಿ. ಇದೇ ಜೋಡಿ ಈಗಾಗಲೇ 'ಕಾಫಿ ವಿತ್ ಮೈ ವೈಫ್' ಹಾಗೂ 'ನನ್ ಲೈಫ್ ಅಲ್ಲಿ' ಚಿತ್ರಗಳಲ್ಲಿ ಒಟ್ಟಾಗಿ ನಟಿಸಿದೆ. ಇದೀಗ ಮೂರನೇ ಸಲ ಒಟ್ಟಾಗಿ ನಟಿಸುತ್ತಿರುವುದು ಅನೀಶ್–ಸಿಂಧು ಜೋಡಿಯ ವಿಶೇಷ. ಅಂದಹಾಗೆ, ಚಿತ್ರದ ಮತ್ತೊಂದು ಮುಖ್ಯಪಾತ್ರದಲ್ಲಿ ದೀಪಾ ಸನ್ನಿಧಿ ನಟಿಸುತ್ತಿದ್ದಾರೆ. ಇಡೀ ಸಿನಿಮಾ ಒಂದು ಸುಂದರ ಪಯಣದಂತಿದ್ದು, ಈ ಜರ್ನಿಯ ಎರಡು ತುದಿಗಳಾಗಿ ದೀಪಾ ಮತ್ತು ಸಿಂಧು ಅವರ ಪಾತ್ರಗಳಿವೆ.

ಹರಿಕೃಷ್ಣ ಸಂಗೀತ ನೀಡಿರುವ ಈ ಚಿತ್ರದ ಹಾಡುಗಳ ಧ್ವನಿಮುದ್ರಿಕೆ ಸಮಾರಂಭದಲ್ಲಿ ರವಿಚಂದ್ರನ್, ಶಿವರಾಜಕುಮಾರ್ ಹಾಜರಿದ್ದುದು ವಿಶೇಷ. ಪ್ರತಿಭಾವಂತ ಕಲಾವಿದರನ್ನೇ ಹೆಕ್ಕಿ ಸಿನಿಮಾ ಮಾಡುತ್ತಿರುವ ನಿರ್ದೇಶಕರ ಪರಿಶ್ರಮವನ್ನು ಶಿವಣ್ಣ ಮೆಚ್ಚಿಕೊಂಡರು.

■ ರಘು